

ವಾರದ ಪತ್ರ

## ಹೊಂದಾಣಿಕೆ ಇಲ್ಲದ ನಕ್ಷತ್ರ

ಕಲರ್ಸ್ ಕನ್ನಡ 'ಭಾಗ್ಯಲಕ್ಷ್ಮಿ'ಯ ತಾಂಡವ ಸೂರ್ಯವಂಶಿ ತನ್ನ ತಾಯಿ ಹಾಗೂ ಪತ್ನಿ ಭಾಗ್ಯಳನ್ನು ಬಿಟ್ಟುಹೋಗಿದ್ದಾನೆ. ಇದನ್ನು ತಿಳಿದು ತಾಯಿ ಕುಸುಮಾ ದೇವರ ಮೊರೆಹೋದಾಗ ಅಲ್ಲಿ ಅರ್ಚಕರಿಗೆ ಪುಷ್ಯ ನಕ್ಷತ್ರ ಹಾಗೂ ರೋಹಿಣಿ ನಕ್ಷತ್ರ ಅವರ ಹೆಸರಲ್ಲಿ ಅರ್ಚನೆ ಮಾಡಲು ಹೇಳುತ್ತಾರೆ. ಈ ಎರಡು ನಕ್ಷತ್ರಗಳು ವಿವಾಹಕ್ಕೆ ಹೊಂದಾಣಿಕೆ ಆಗೋಲ್ಲ. ಇದೇ ಮದುವೆಯಲ್ಲಿನ ಎಲ್ಲ ಸಮಸ್ಯೆಗೆ ಕಾರಣವೆ?

—ಅನುರಾಧ ಟಿ., ದಾವಣಗೆರೆ

## ಹೆಣ್ಣಿನ ಘನತೆಯ ಹಣತೆ

ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮಿ'ಯನ್ನು ಈಚೆಗೆ ಚೆನ್ನಾಗಿ ನಿರೂಪಣೆ ಮಾಡುತ್ತಿದ್ದಾರೆ. 'ಕುಸುಮಾ' ಅತ್ತೆ ಪಾತ್ರದ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡಿದ್ದಾರೆ. ಒಬ್ಬ ಹೆಣ್ಣುಮಗುವಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡುವ ಮೂಲಕ ಇತಿಹಾಸವನ್ನು ಸೃಷ್ಟಿಸಬಹುದು ಎಂದು ನಮ್ಮ ಹಿರಿಯರು ಹೇಳಿದ್ದಾರೆ. ಅದಕ್ಕೆ ಪೂರಕವಾಗಿ ಕುಸುಮ ಪಾತ್ರದ ಮೂಲಕ ಹೇಳಿಸಿ, ಹೆಣ್ಣುಮಗುವಿನ ಘನತೆಯನ್ನು ಎತ್ತಿ ಹಿಡಿದಿದ್ದಾರೆ. ಇಂತಹ ಒಳ್ಳೆಯ ಸಂದೇಶ ನೀಡುವ ಸಂಚಿಕೆಗಳು ಹೆಚ್ಚಿನ ಸಂಖ್ಯೆಯಲ್ಲಿ ಬರಲೆಂದು ಹಾರೈಸುತ್ತೇನೆ.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

## ಚೌಕಟ್ಟಿನಿಂದ ಹೊರಬರದ 'ಕನ್ಯಾದಾನ'

ಉದಯದ 'ಕನ್ಯಾದಾನ' ಸೀರಿಯಲ್‌ನಲ್ಲಿ ರೇವತಿ ಮನೆ ಬಿಟ್ಟು ಬಂದ ನಂತರ ವಿಚ್ಛೇದಿತ ಗಂಡನೊಂದಿಗೆ ಆಶ್ರಯಕ್ಕಾಗಿ ಬೀದಿ ಬೀದಿ ಅಲೆಯುತ್ತಿರುತ್ತಾಳೆ. ಈ ಸಂದರ್ಭದಲ್ಲಿ ಬೇರೆ ಸಾಧ್ಯತೆಗಳನ್ನು ಪರಿಚಯಿಸುವ ಸಾಧ್ಯತೆ ಇತ್ತು. ಸರ್ಕಾರದ ಮಹಿಳಾ ಅಭಿವೃದ್ಧಿ ಇಲಾಖೆಯ 'ಸ್ವಾದಾರ' ಸಾಂತ್ವನ ಕೇಂದ್ರ ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತದೆ. ನಿರ್ದೇಶಕರು ಇಂತಹ ಸತ್ಯಗಳನ್ನು ವಿವರವಾಗಿ ನೀಡುವುದರಿಂದ ವೀಕ್ಷಕರಿಗೂ ಅನುಕೂಲವಾಗುತ್ತದೆ.

—ರಮಾಗೋವಿಂದ ರಾಜು, ಬೆಂಗಳೂರು

## ಮುದ್ದಾಟ ತೆರೆಯ ಮರೆಗಿರಲಿ

ಝೀ ಕನ್ನಡದ 'ಜೋಡಿ ನಂ.1' ನೋಡಿದಾಗ ಮನಸಿಗೆ ಹಿತ ಎನಿಸದೆ ಕಸಿವಿಸಿ ಎಂದೆನಿಸುತ್ತದೆ. ದಾಂಪತ್ಯದ ಶೃಂಗಾರ ಯಾವಾಗಲೂ ನಾಲ್ಕು ಗೋಡೆಗಳ ಮಧ್ಯೆ ಇದ್ದರೆ ಸೊಬಗು ಮತ್ತು ಚೆಂದ. ವಾರಾಂತ್ಯದ ಕಾರ್ಯಕ್ರಮವನ್ನು ಮಕ್ಕಳು ನೋಡುತ್ತಿದ್ದರೆ ಹಿರಿಯರಿಗೆ ಮುಜುಗರ ಎನಿಸುತ್ತದೆ. ಅಲ್ಲದೆ ದಂಪತಿ ಮುದ್ದಾಟ ವೇದಿಕೆ ಮೇಲೆ ತೋರಿಸುವುದನ್ನು ನಿಲ್ಲಿಸುವುದಲ್ಲದೆ ಕಾರ್ಯಕ್ರಮದಲ್ಲಿ ಪ್ರಬುದ್ಧತೆ ತೋರಿಸುವುದು ಅತ್ಯವಶ್ಯಕ.

—ವಿ. ಸುರೇಶ್, ಹುಬ್ಬಳ್ಳಿ

## ರಕ್ತದಾನ: ವಾಸ್ತವದ ನಿರೂಪಣೆ ಅಗತ್ಯ

ಝೀ ಕನ್ನಡದ ಡ್ರಾಮಾ ಜೂನಿಯರ್ಸ್‌ನಲ್ಲಿ 'ಒ' ನೆಗೆಟಿವ್ ರಕ್ತ ಬೇಕಾಗಿದೆಯೆಂದು, ಅದೇ ಬ್ಲಡ್ ಗ್ರೂಪಿನ ಪರಮೇಶಿಯನ್ನು ರಕ್ತಕ್ಕಾಗಿ ಕಾಡುವ ಸ್ಕಿಟ್ ಪ್ರದರ್ಶಿಸಿದ ಪುಟಾಣಿ ಸ್ಪರ್ಧಾಳುಗಳು ವೀಕ್ಷಕರ ಮನ ಸೆಳೆದರು. ಸಿನಿಮಾದಲ್ಲಿ ರೋಗಿಗೆ ರಕ್ತದ ಅವಶ್ಯಕತೆ ಬಂದ ತಕ್ಷಣ ಆ ಗ್ರೂಪಿನವರನ್ನು ಹುಡುಕಾಡಿ ಪಡೆಯುತ್ತಾರೆ. ವಾಸ್ತವದಲ್ಲಿ ವೈದ್ಯರು ಬ್ಲಡ್ ಬ್ಯಾಂಕ್‌ನಿಂದ ತರಿಸಿಕೊಳ್ಳುವ ಏರ್ಪಾಡು ಮಾಡುತ್ತಾರೆ. ಹಾಗಾಗಿ ವಾಸ್ತವ ಸತ್ಯಕ್ಕೆ ಅನುಗುಣವಾಗಿ ಘಟನೆಯನ್ನು ನಿರೂಪಿಸಿದರೆ ಅರ್ಥಪೂರ್ಣವೆನಿಸುತ್ತದೆ. ಜೀವನಕ್ಕೆ ಮಾರ್ಗದರ್ಶಕವೂ ಆಗುತ್ತದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## 'ನಾನು ಬಿಗ್ ಬಾಸ್' ಆಗಬೇಕಲ್ಲವೇ?

ಕಲರ್ಸ್ ಕನ್ನಡದ 'ಬಿಗ್ ಬಾಸ್' ವೀಕ್ಷಕರಲ್ಲಿ ನಾನೂ ಒಬ್ಬ. ಮನೆಯವರಿಗೆ ಆದೇಶ ನೀಡಲು ಆಗಾಗ ಬಿಗ್ ಬಾಸ್ 'ಇದು ಬಿಗ್ ಬಾಸ್' ಎಂದು ಹೇಳುವುದು ರೂಢಿಯಲ್ಲಿದೆ. ಇಂಗ್ಲಿಷ್‌ನಲ್ಲಿ 'This is big boss' ಎನ್ನುವ ಅರ್ಥ ಬರುವ ಹಾಗೆ 'ಇದು ಬಿಗ್ ಬಾಸ್' ಎನ್ನುವ ಪ್ರಯೋಗ ಕನ್ನಡಕ್ಕೆ ಸೂಕ್ತವಲ್ಲ. 'ನಾನು, ಬಿಗ್ ಬಾಸ್' ಎನ್ನುವುದು ಸರಿಯಾದ ರೀತಿ.

—ಛಾಯಾದ್ರಿ ಪಿ. ವೈದ್ಯ, ಬೆಂಗಳೂರು

## ಅಪರೂಪದ ಸಂದರ್ಶನ

ಚಂದನದ 'ಶುಭೋದಯ'ದಲ್ಲಿ ಪೊಲೀಸ್ ಅಧಿಕಾರಿ ಎಲ್.ವೈ. ರಾಜೇಶ್ ಅವರ ಸಂದರ್ಶನವು ಮನಮುಟ್ಟುವಂತೆ ಇತ್ತು. ಅವರ ಸಮಾಜಮುಖಿ ಕೆಲಸಗಳು, ಸಹೋದ್ಯೋಗಿಗಳಿಗೆ ಚೇತನ ತುಂಬುವ ಕಳಕಳಿ ಇಷ್ಟವಾದವು. ಅರ್ಧಕ್ಕೆ ವಿದ್ಯಾಭ್ಯಾಸ ನಿಲ್ಲಿಸಿದವರಿಗೆ ಸಮರ್ಪಕ ನೆರವು ನೀಡಿ ಮುಂದಿನ ಓದಿಗೆ ಅವಕಾಶ ಮಾಡುವುದು ಮೆಚ್ಚುವಂಥದ್ದು.

—ಸಿಹಿಮೊಗೆ ರಮೇಶ್, ಮೈಸೂರು

## ಮಾನವೀಯತೆ, ಮನರಂಜನೆಯ ಆದ್ಯತೆ

ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮಿ'ಯಲ್ಲಿ ಭಾಗ್ಯಳ ನೃತ್ಯ ಕಾರ್ಯಕ್ರಮ ನಯನಮನೋಹರವಾಗಿತ್ತು. ಇಂತಹ ಭಾವ ತುಂಬಿದ ಕಾರ್ಯಕ್ರಮಗಳು ಹೆಚ್ಚಾಗಬೇಕು. ಸ್ಟಾರ್ ಸುವರ್ಣದ 'ನೀನಾದೆ ನಾನೇ' ಹಾಗೂ 'ಗೌರಿಶಂಕರ'ದಲ್ಲಿ ರೌಡಿಗಳಿಗೆ ಪ್ರಾಮುಖ್ಯತೆ ಹೆಚ್ಚಾಗಿ ಕಿರಿಕಿರಿ ಅನ್ನಿಸುತ್ತಿದೆ. ಇವು ಸಮಾಜಕ್ಕೆ ಕೆಟ್ಟ ಸಂದೇಶವನ್ನು ಕೊಡುತ್ತಿವೆ. ಮನರಂಜನೆಯ ಮೂಲಕ ಮಾನವೀಯತೆಯನ್ನು ನೀಡುವುದು ಆದ್ಯತೆ ಆಗಬೇಕು.

—ವಿ.ಕೆ. ದ್ವಾರಕನಾಥ್, ಬೆಂಗಳೂರು

## ಮನಸ್ಸು-ಮನೆತನ ಒಂದಾಗಲಿ

ಝೀ ವಾಹಿನಿಯ 'ಶ್ರೀರಸ್ತು ಶುಭಮಸ್ತು' ಧಾರಾವಾಹಿಯಲ್ಲಿ ದತ್ತ ಮತ್ತು ಮಾಧವ ಮಾಡಿದ ದುಡುಕಿನ ನಿರ್ಣಯದಿಂದ ಸಮರ್ಥ ಮತ್ತು ಅಭಿ ದೂರವಾಗಬೇಕಿದೆ. ಎರಡೂ ಕುಟುಂಬಗಳಲ್ಲಿ ಮನಶಾಂತಿ ಇಲ್ಲದಂತೆ ಆಗಿದೆ. ಮುಂದೆ ಆ ಮನೆತನಗಳು ಹತ್ತಿರ ಆಗಬಹುದು. ಆದರೆ ಹಿಂದಿನ ವಾತ್ಸಲ್ಯ ಉಳಿಯಲಾರದು. ಈ ನಿಟ್ಟಿನಲ್ಲಿ ಸಂಘರ್ಷ ಕೊನೆಗೊಳಿಸಿ ಸಾಮರಸ್ಯ ಆ ಕುಟುಂಬದಲ್ಲಿ ನೆಲೆಸುವಂತೆ ಆಗಲಿ.

—ಜಿ.ವಿ. ಸರಂಗಿ ಕೇಶವಾಪುರ, ಹುಬ್ಬಳ್ಳಿ